| 1 | 2 | 3 | 4 | 5 | 6 |
|---|---|---|---|---|---|
| 20. | ಮಂಡ್ಯ | 40 | 10 | 29 | 70 |
| 21. | ಉತ್ತರ ಕನ್ನಡ | 19 | 15 | 17 | 45 |
| 22. | ಕೊಪ್ಪಳ | 18 | 07 | 04 | 28 |
| 23. | ರಾಯಚೂರು | 21 | 06 | 11 | 35 |
| 24. | ದಕ್ಷಿಣ ಕನ್ನಡ | 34 | 17 | 37 | 80 |
| 25. | ಉಡುಪಿ | 34 | 14 | 10 | 34 |
| 26. | ಶಿವಮೊಗ್ಗ | 32 | 14 | 21 | 62 |
| 27. | ತುಮಕೂರು | 47 | 60 | 38 | 133 |
| 28. | ಕೊಡಗು | 10 | 11 | 08 | 26 |

## ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ

994 (1272) ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೇಗಾಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಲ್ಲಿರುವ 150 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ವೈದ್ಯರ ಕೊರತೆ ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಈ ಕೆಳಕಾಣಿಸಿರುವಂತೆ ಸಾಮಾನ್ಯ ಕರ್ತವ್ಯ ವೈದ್ಯಧಿಕಾರಿಗಳ ಹುದ್ದೆಗಳನ್ನು ಹಾಗೂ ತಜ್ಞರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

1. ಸರ್ಕಾರದ ಆದೇಶ ಸಂಖ್ಯೆ:ಆಕುಕ 504 ಹೆಚ್ಎಸ್ಹೆಚ್ 97 ದಿನಾಂಕ:17-10-07 ರ ಪ್ರಕಾರ ಎಂಬಿಬಿಎಸ್ ಪದವಿಯ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

2. ಸರ್ಕಾರದ ಆದೇಶ ಸಂಖ್ಯೆ: ಆಕುಕ 684 ಹೆಚ್ಎಸ್ಹೆಚ್ 2000 ದಿನಾಂಕ:27-10-2000 ರನ್ವಯ ತಜ್ಞತೆ ಹೊಂದಿರುವ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

3. ಸರ್ಕಾರದ ಆದೇಶ ಸಂಖ್ಯೆ: ಆಕುಕ 282 ಹೆಚ್ಎಸ್ಹೆಚ್ 01 ದಿನಾಂಕ:29-5-2001ರ ಪ್ರಕಾರ ಖಾಸಗಿ ವಲಯ ತಜ್ಞ ವೈದ್ಯರನ್ನು ಸಮಾಲೋಚಕರನ್ನಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

4. ಸರ್ಕಾರದ ಆದೇಶ ಸಂಖ್ಯೆ: ಆಕುಕ 185 ಹೆಚ್ಎಸ್ಹೆಚ್ 2002 ದಿನಾಂಕ:20-4-2002 ರನ್ವಯ ಖಾಸಗಿ ತಜ್ಞ ವೈದ್ಯರನ್ನು ಗೌರವಾರ್ಥ ತಜ್ಞ ವೈದ್ಯರಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

5. ಸರ್ಕಾರಿ ಆದೇಶ ಸಂಖ್ಯೆ: ಆಕುಕ 183 ಹೆಚ್‌ಎಸ್‌ಹೆಚ್ 02 ದಿನಾಂಕ:6-5-2002 ರಲ್ಲಿ ನಿವೃತ್ತ ತಜ್ಞ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

## ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಟ್ಟಡ ನಿರ್ಮಾಣ

(1273) ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೇಗಾಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದ ಸಾರ್ವಜನಿಕ ಆಸ್ಪತ್ರೆಯ ಕಟ್ಟಡದ ಕಾರ್ಯವು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಟ್ಟಡದ ಕಾರ್ಯವನ್ನು ಪೂರ್ತಿಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು

ಆ) ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆಯನ್ನು 100 ರಿಂದ 150 ಹಾಸಿಗೆಗಳ ಆಸ್ಪತ್ರೆಯಾಗಿ ವಿಸ್ತರಿಸುವ ಕಾಮಗಾರಿಯನ್ನು ಪೂರ್ಣಗೊಳಿಸಿ ದಿನಾಂಕ: 23-9-2002 ರಂದು ಹಸ್ತಾಂತರಿಸಲಾಗಿದೆ. ಇದರಲ್ಲಿ ರಕ್ತ ನಿಧಿ ಕೇಂದ್ರ 4 ವೈದ್ಯಾಧೀಕಾರಿಗಳ ವಸತಿ ಗೃಹ, 4 ಗ್ರೂಪ್ ಡಿ ನೌಕರರ ವಸತಿ ಗೃಹ, 8 ಶುಶ್ರೂಷಕಿಯರ ವಸತಿ ಗೃಹಗಳು, 50 ಸಾವಿರ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ನೀರಿನ ತೊಟ್ಟಿ, 1 ಲಕ್ಷ ಲೀಟರ್ ಸಾಮರ್ಥ್ಯದ ನೀರಿನ ಸಂಗ್ರಹಾಗಾರ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ, ಸೌರ ಶಕ್ತಿ ವಿದ್ಯುತ್ ಮತ್ತು ಬಿಸಿನೀರಿನ ವ್ಯವಸ್ಥೆ, ಜನರೇಟರ್ ಅಳವಡಿಕೆ ಮತ್ತು ಕೊಳವೆ ಬಾವಿ ಕಾಮಗಾರಿಗಳು ಸೇರಿರುತ್ತದೆ.

ಆಸ್ಪತ್ರೆಯ ದಿನನಿತ್ಯದ ಕೆಲಸಕ್ಕೆ ಅಡಚಣೆ ಉಂಟಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಮೇಲಿನ ಕಾಮಗಾರಿಗಳನ್ನು ಪೂರ್ಣಗೊಳಿಸಿ ಹಸ್ತಾಂತರಿಸುವ ತನಕ ಈ ಆಸ್ಪತ್ರೆಯ ನವೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಅಪಘಾತ ವಿಭಾಗದ ಮುಖ್ಯದ್ವಾರವನ್ನು ಕಟ್ಟಲು ಕಟ್ಟಡವನ್ನು ಹೊಡೆಯ ಬೇಕಾದ್ದರಿಂದ ಹೊಡೆಯುವ ಈ ಕಟ್ಟಡದಲ್ಲಿ ಹೊರ ರೋಗಿಗಳ ವಿಭಾಗವನ್ನು ನಿರ್ವಹಿಸಲಾಗುತ್ತಿತ್ತು. ಈಗ ಹೊಸ ಕಟ್ಟಡವನ್ನು ಹಸ್ತಾಂತರಿಸಿದ ಮೇಲೆ ಈ ಕಟ್ಟಡವನ್ನು ತೆರವು ಗೊಳಿಸಿ ನವೀಕರಣಕ್ಕಾಗಿ ಬಿಟ್ಟುಕೊಟ್ಟಿರುತ್ತಾರೆ. ಅಪಘಾತ ವಿಭಾಗದಲ್ಲಿ ಮುಖ್ಯ ದ್ವಾರ ಕಟ್ಟುವುದು ಸೇರಿದಂತೆ ನವೀಕರಣ ಕಾಮಗಾರಿಗಳಿಗಾಗಿ ರೂ.16.95 ಲಕ್ಷಗಳಿಗೆ ಅಂದಾಜು ತಯಾರಿಸಿ ಕಾಮಗಾರಿಯನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಮಕ್ಕಳ ಮತ್ತು ಹೆಂಗಸರ ವಾರ್ಡ್, ಸರ್ವೀಸ್ ಬ್ಲಾಕ್, ಕುಷ್ಠರೋಗಿ ವಾರ್ಡ್, ಶಸ್ತ್ರ ಚಿಕಿತ್ಸಾ ಕೊಠಡಿಗಳ ನವೀಕರಣ, ರಕ್ತ ನಿಧಿ ಕೇಂದ್ರದಲ್ಲಿ ಗ್ರಾನೈಟ್ ಚಪ್ಪಡಿ ಹಾಸುವುದು, ಅಡುಗೆ ಮನೆ ಮತ್ತು ಪುರುಷರ ವಿಶೇಷ ಕೊಠಡಿಗಳ ಕಾಮಗಾರಿಗಳು ಸೇರಿರುತ್ತದೆ. ಈ ಕಾಮಗಾರಿಗಳನ್ನು ಮಾರ್ಚ್ 2003 ರ ಅಂತ್ಯದೊಳಗೆ ಮುಗಿಸುವ ಗುರಿ ಹೊಂದಲಾಗಿದೆ.